**ದಿನಾಂಕಃ 27/11/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಜೆ.ಡಿ.ಆರ್ ಪರ ಶ್ರೀ ಐ.ಆರ್.ಎಸ್ **ವಕೀಲರಿಂದಃ**

1. ಜೆಡಿಆರ್ ರವರು ನನಗೆ ತೊಂದರೆ ಕೊಡುತ್ತಾರೆಂದು ಈ ಪ್ರಕರಣ ದಾಖಲಿಸಿದ್ದೇನೆ. ಲೋಕೇಶ, ನವೀನ, ಮಂಜು, ಶಿವಲಿಂಗ, ಶಿವಮಾದ ಮತ್ತು ಅಜ್ಜಪ್ಪ ರವರು ತೊಂದರೆ ಕೊಡುತ್ತಾರೆಂದು ದಾಖಲಿಸಿದ್ದೇನೆ. ನಮ್ಮ ಜಮೀನಿನ ಅಕ್ಕಪಕ್ಕದಲ್ಲಿ ಜೆಡಿಆರ್ ರವರ ಜಮೀನುಗಳು ಇಲ್ಲ. ಅವರ ಜಮೀನುಗಳು ಅರ್ಧ ಕಿ.ಮೀ ಅಂತರದಲ್ಲಿವೆ. ನಮ್ಮ ಜಮೀನಿನ ಪಕ್ಕದಲ್ಲಿ ಅವರ ಮನೆಗಳು ಇಲ್ಲ. ಅವರು ನಮ್ಮ ಜಮೀನಿನ ಅಕ್ಕಪಕ್ಕದಲ್ಲಿರುವ ಜಮೀನುಗಳನ್ನು ಬೋಗ್ಯಕ್ಕೆ ಪಡೆದಿಲ್ಲ. ನಾನು ಅರ್ಜಿಯನ್ನು ಸರ್ವೆ ನಂ. 60 ರ 4 ಎಕರೆ 38 ಗುಂಟೆಗೆ ಸಲ್ಲಿಸಿದ್ದೇನೆ. ಇದರ ಚಕ್ಕುಬಂದಿ ಪೂರ್ವಕ್ಕೆ ಜವರಯ್ಯ ನವರ ಜಮೀನು, ಪಶ್ಚಿಮಕ್ಕೆ ಅರ್ಜುನ್ ಲಾಲ್ ಸೇಟು ರವರ ಜಮೀನು, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಪುಟ್ಟಮ್ಮ ಕರೀಗೌಡರ ಜಮೀನು. ನಾವು 1970 ರಲ್ಲಿ ಸುಬ್ಬರಾಮಯ್ಯ ನವರಿಂದ ಖರೀದಿಸಿದ್ದು. ನಾವು ಖರೀದಿಸುವಾಗ ಸರ್ವೆ ನಂ. 60 ಇತ್ತು. ಆಗ ಪೋಡು, ಸ್ಕೆಚ್ ಆಗಿತ್ತು. ಅದನ್ನು ಹಾಜರುಪಡಿಸಿದ್ದೆ. ನಾನು ಖರೀದಿಸುವ ಮುನ್ನ ಜೆಡಿಆರ್ ಗಳು ಯಾರೂ ಸ್ವಾಧೀನದಲ್ಲಿರಲಿಲ್ಲ. ಅವರ ಮನೆ ಸಹ ಇರಲಿಲ್ಲ. ಜೆಡಿಆರ್ ಗಳು ಅವರ ಜಮೀನುಗಳಲ್ಲಿ ಅವರು ಮನೆ ಕಟ್ಟಿಕೊಂಡಿದ್ದಾರೆ. ಅವರು ನಮ್ಮ ಜಮೀನಿನಿಂದ ಅರ್ಧ ಕಿ.ಮೀ ದೂರದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

2. ನಾನು ಜವರಯ್ಯ ನವರ ಮೇಲೆ ಒತ್ತುವರಿ ಮಾಡಿಕೊಂಡಿದ್ದಾರೆಂದು ದಾವೆ ಹೂಡಿದ್ದೆ. 4 ಎಕರೆ 38 ಗುಂಟೆಯಲ್ಲಿ ಜವರಯ್ಯ ನವರು ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಜವರಯ್ಯ ನವರು ನಮ್ಮ ಜಮೀನಿನ 20 ಗುಂಟೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದರೆ ಇರಬಹುದು. ಸುಬ್ಬರಾಮಯ್ಯ ರವರಿಗೆ ಸರ್ಕಾರದಿಂದ ಮಂಜೂರಾದ ಜಮೀನು ಎಂದರೆ ನನಗೆ ಗೊತ್ತಿಲ್ಲ. ಇದೇ ಸರ್ವೆ ನಂಬರ್ ನಲ್ಲಿ ಜೆಡಿಆರ್ ರವರಿಗೂ ಸಹ ಸಾಗುವಳಿ ಮುಖಾಂತರ ಜಮೀನು ಮಂಜೂರಾಗಿದೆ

ಎಂದರೆ ಸರಿ. ಈ ಸರ್ವೆ ನಂಬರಿನಲ್ಲಿ ಒಟ್ಟು 80 ಎಕರೆ ಜಮೀನು ಇದೆ ಎಂದರೆ ಇರಬಹುದು. ನಮ್ಮ ಜಮೀನಿನ ದುರಸ್ತು ಆಗಿದೆ. ಅವರ ಜಮೀನು ದುರಸ್ತು ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಉತ್ತರಕ್ಕಿರುವ ಸರ್ಕಾರಿ ರಸ್ತೆ ಎಂದರೆ ಮೈಸೂರು–ಕೇರಳ ರಸ್ತೆ. ರಸ್ತೆಯಿಂದ 60 ಅಡಿ ಬಿಟ್ಟು ಮನೆ ಕಟ್ಟಿದ್ದೇನೆ.

(ಮುಂದುವರೆದ ಪಾಟೀಸವಾಲನ್ನು ಜೆಡಿಆರ್ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿ.ಸಿ.ನ್ಯಾ. ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**